ತಿಳಿಯುವುದಿಲ್ಲ. 2003ರ ಆಗಸ್ಟ್ 14ರಿಂದ 15ರವರೆಗೆ ಒ.ಂದು ದಿನ ಮಾತ್ರ ಬ್ಲಾಕೌಟ್ ಮಾಡಿದ್ದರಿಂದ ವಿದ್ಯುದ್ದೀಪಗಳು ಆರಿ ಕತ್ತಲು ಆವರಿಸಿತ್ತಂತೆ. ಆ ಬಳಿಕ ಯಾವತ್ತೂ ಇಲ್ಲಿ ಕರೆಂಟ್ ಹೋಗಿಲ್ಲವಂತೆ!

**ಹೊಸ ವರ್ಷಾಚರಣೆ**

ಈ ಚೌಕದ ಅತಿ ಮುಖ್ಯ ಆಕರ್ಷಣೆಯೆಂದರೆ ಪ್ರತಿವರ್ಷ ಡಿಸೆಂಬರ್ 31ರ ರಾತ್ರಿ 12 ಗಂಟೆಗೆ ಹೊಸ ವರ್ಷವನ್ನು ಸ್ವಾಗತಿಸುವ ಸಂಭ್ರಮ. ಆ ರಾತ್ರಿ 12 ಗಂಟೆಗೆ ಸರಿಯಾಗಿ ವಿದ್ಯುದ್ದೀಪಗಳಿಂದ ಝಗಮಗಿಸುವ ದೊಡ್ಡ ಕ್ರಿಸ್ಟಲ್ ಚೆಂಡೊಂದನ್ನು ಮೇಲಿನಿಂದ ಕೆಳಗಿಳಿಸುತ್ತಾರೆ. ಪ್ರಪ್ರಥಮವಾಗಿ 31ನೇ ಡಿಸೆಂಬರ್ 1907ರಂದು ಕ್ರಿಸ್ಟಲ್ ಚಂಡನ್ನು ಕೆಳಗಿಳಿಸಿ ಹೊಸ ವರ್ಷವನ್ನು ಸ್ವಾಗತಿಸಲಾಯಿತು. ಆ ದಿನ ವಾಲ್ಟರ್ ಎಫ್ ಪಾಮಾರ್ ಎಂಬ ಮುಖ್ಯ ಎಲೆಕ್ಟ್ರಿಕಲ್ ಎಂಜಿನಿಯರ್ ನೇತೃತ್ವದಲ್ಲಿ 5 ಅಡಿ ವ್ಯಾಸದ 25 ವ್ಯಾಟ್ಸ್‌ನ 100 ಬಲ್ಬುಗಳನ್ನು ಹೊಂದಿ 320 ಕೆಜಿ ತೂಗುವ ಕ್ರಿಸ್ಟಲ್ ಚೆಂಡನ್ನು ಇಳಿಸಲಾಯಿತು.

ನಂತರದಲ್ಲಿ ಈ ಕ್ರಿಸ್ಟಲ್ ಚೆಂಡಿನ ಆಕಾರ, ವಿನ್ಯಾಸಗಳು ವರ್ಷದಿಂದ ವರ್ಷಕ್ಕೆ ಬದಲಾಗುತ್ತಲೇ ಇವೆ. 2000ನೇ ವರ್ಷದಿಂದ ವಾಟರ್‌ಫೋರ್ಡ್ ಟ್ರೇಡ್ ಮಾರ್ಕಿನ ಕ್ರಿಸ್ಟಲ್ ಚೆಂಡನ್ನು ಇಳಿಬಿಡುತ್ತಿದ್ದಾರೆ. ಈ ಕ್ರಿಸ್ಟಲ್ ಚೆಂಡಿನ ವಿವರಗಳು ಕೆಳ ಕಂಡಂತಿವೆ,

ವ್ಯಾಸ– 6 ಅಡಿ.

ತೂಕ– 490 ಕೆ.ಜಿ.

ತ್ರಿಭುಜಾಕಾರದ ಗಾಜಿನ ಕ್ರಿಸ್ಟಲ್ಲುಗಳ ಸಂಖ್ಯೆ– 504

ಹೊರಗಡೆಯಿಂದ ಚೆಂಡಿನ ಮೇಲೆ ಬೆಳಕು ಬೀರುವ ಹಾಲೋಜನ್ ದೀಪಗಳ ಸಂಖ್ಯೆ 168.

ಚೆಂಡಿನ ಒಳಗಡೆ ಬೆಳಗುವ ಹಸಿರು, ನೀಲಿ, ಹಳದಿ ಮತ್ತು ಕೆಂಪು ದೀಪಗಳ ಸಂಖ್ಯೆ 432.

ಈ ಚೆಂಡನ್ನು ಟೈಮ್ ಸ್ಕ್ವೇರಿನಲ್ಲಿರುವ ಒನ್ ಟೈಮ್ ಸ್ಕ್ವೇರ್ ಕಟ್ಟಡದ ಛಾವಣಿಯ ಮೇಲೆ 77 ಅಡಿ ಉದ್ದದ ಕೋಲೊಂದರ ತುದಿಯಿಂದ, ಕಟ್ಟಡದ ಛಾವಣಿಯ ಮೇಲಕ್ಕೆ ಬೀಳಿಸುತ್ತಾರೆ. ಇದನ್ನು ನೋಡಲು ಆ ರಾತ್ರಿ ಸುಮಾರು ಮೂರು ಲಕ್ಷ ಮಂದಿ ಸೇರಿರುತ್ತಾರಂತೆ. ಆ ಜನಜಂಗುಳಿಯನ್ನು ನಿಯಂತ್ರಿಸಲು ಪೊಲೀಸರು ಹರ ಸಾಹಸ ಪಡಬೇಕಾಗುತ್ತದಂತೆ.

ಈ ಎಲ್ಲ ಆಕರ್ಷಣೆಗಳಿಂದಾಗಿ ನ್ಯೂಯಾರ್ಕ್ ನಗರದ ಟೈಮ್ ಸ್ಕ್ವೇರ್ ಜಗತ್ಪ್ರಸಿದ್ಧವಾಗಿದೆ.




ಎಂಪೈರ್ ಸ್ಟೇಟ್ ಕಟ್ಟಡ



ಫ್ರೀಡಂ ಟಾವರ್ ಮಾಡೆಲ್